# ಶ್ರಾವಣ ಸಂಪತ್ತು ಶನಿವಾರದ ಹಾಡು

ಗಜವದನನ ಪಾದಾಂಬುಜಗಳಿಗೆರಗುವೆ । ಅಜನರಸಿಗೆ ನಮಸ್ಕರಿಸಿ । ತ್ರಿಜಗವಂದಿತ ಲಕ್ಷ್ಮೀನಾರಾಯಣಸ್ವಾಮಿಯ । ನಿಜ ಪತ್ನಿ ಕಥೆಯ ವರ್ಣಿಸುವೆ ॥ ೧ ॥ ಅರಸನ ಸೇವೆ ಮಾಡುತೊಂದು ಪಟ್ಟಣದೊಳು ಇರುತಿದ್ದ ಸೋಮೇಶ ಭಟ್ಟ । ಹರುಷದಿಂದಲಿ ಸೊಸೆಯರು ಗಂಡುಮಕ್ಕಳು ಭರಿತರಾದರು ಸುಖದಿಂದ ॥ ೨ ॥ ಆ ಮಹಾ ಕ್ಷೀರ ಸಾಗರದಲ್ಲಿ ಜನಿಸಿದ । ಶ್ರೀಮಹಾಲಕ್ಷ್ಮೀದೇವಿಯನು । ನೇಮ ದಿಂದಿಂದಿಟ್ಟು ನಿಷ್ಠೇಯಲಿ ಸೋಮೇಶನು । ತಾ ಮಹಾ ಸಂಭ್ರಮ-ದಿಂದ ॥ ೩ ॥ ಚಾರು ಪರಿಮಳ ಅರಿಶಿಣ ಗಂಧ ಕುಂಕುಮ । ಕೇದಿಗೆ ಕುಸುಮ ಮಲ್ಲಿಗೆಯ । ಮಾಧವನರಸಿ ಮಹಾಲಕ್ಷ್ಮೀಗರ್ಪಿಸಿ । ಮಂಗಳಾರತಿ ಬೆಳಗಿದರು ॥ ೪ ॥ ಹೋಳಿಗೆಣ್ಣೋರಿಗೆ ಭಕ್ಷ, ಸಣ್ಣ ಶಾವಿಗೆ ಪರಮಾನ್ನ । ಶಾಲ್ಯನ್ನ ಶಾಕಂಗಳು । ಚೆನ್ನವಾಗಿದ್ದ ತಾಂಬೂಲ ವನ್ನರ್ಪಿಸಿ । ಆದರದಿಂದುಂಡರತಿ ಹರುಷದಲಿ ॥ ೫ ॥ ಸುಂದರ ಗೌರಿ ಶುಕ್ರವಾರ ಪೂಜಿಸಿ । ಆನಂದದಿ ಶನಿವಾರದಲ್ಲಿ । ಕುಂದ ಮಂದಾರ ಮಲ್ಲಿಗೆ ಗಂಧ ಕುಂಕುಮ ಚೆಂದದಿಂದಾರತಿ ಬೆಳಗಿದರು ॥ ೬ ॥ ಹಿಟ್ಟಿನ ಕಡುಬು ಹಿಂಡಿ ಪಲ್ಯವನೆ ಮಾಡಿ । ಅಚ್ಚೆಳ್ಳು ಗಾಣದೆಣ್ಣೆಯನು । ನುಚ್ಚು ಮಜ್ಜಿಗೆ ಹುಳಿ ತಿಳಿಯ ಕಟ್ಟಂಬಲಿ । ಇಟ್ಟಾರು ನೈವೇದ್ಯವನು ॥ ೭ ॥ ಭೋಜನಕೆನುತ ಕುಳ್ಳಿರುವೋ ಕಾಲಕ್ಕೆ । ಬಂದು ರಾಜನ ಸತಿಯು ಕುಳ್ಳಿರಲು । ಸೂಜಿಗವೇ ನಿಮ್ಮ ಗೌರಿಯ ಸಂಪತ್ತು ಮೂರ್ಜಗ ದೋಳು ಕಾಣೆನೆಂದು ॥ ೮ ॥ ಬೇಕಾದರೊಂದು ಬೇಡಲರಸನ ಸತಿ । ಸಾಕು ದರಿದ್ರ ದಂಬಲಿಯು । ಹಾಕಿದರ್ ಹರಡಿ ಕಂಕಣದೋಳು ಸಿಕ್ಕೀತು । ನಾ ಕೈಯ ಇಡಲಾರೆನೆಂದು ॥ ೯ ॥ ಥಟ್ಟನೆದ್ದಾಕಿ ಕೊಂಡಷ್ಟು ಪದಾರ್ಥವ ಸಂತುಷ್ಟ-ರಾಗುಂಡ ರವರು । ಕಟ್ಟಿದ್ದ ತೂಗುಮಣಿಯಲಿ ಕಾಲುಗಳಿಳಿಬಿಟ್ಟು ಕೂತಳು ರಾಜನರಸಿ ॥ ೧೦ ॥ ಒಂದೊಂದು ಅಡಿಗೆ ನಿಂದ್ಯವ ಮಾಡಿ ನಗುತಿರೆ ಕುಂದಿತು ಸಕಲ ಸಂಪತ್ತು । ಬಂದಿತು ಪರ ರಾಜರಿಂದ ಮುತ್ತಿಗೆ ದಾರಿ ಬಂಧನ ಮಾಡ

ಬೇಕೆನುತ ॥ ೧೧ ॥ ಅರಿತು ಓಡುತಲಿರೆ ತ್ವರಿತ ಬಂದರಿತನ ಅನುಸರಿಸ್ಯಾಗ ನಡೆದಳು । ದಿನತುಂಬಿದಂತೆ ಗರ್ಭಿಣಿಗಾಗ ಬಂದಾವು ಕ್ಷಣ ಕೊಮ್ಮೆ ಟೊಂಕ ಬೇನೆಗಳು ॥ ೧೨ ॥ ಪುತ್ಥಳಿ ಗೊಂಬೆಯಂದದಿ ಜೋಡು ಮಕ್ಕಳು ಕಿತ್ತಳೆ ವನದಲ್ಲಿ ಜನಿಸೆ । ಹೊಚ್ಚಿಟ್ಟಳಾ ಬಾಳೆ ಎಲೆ ಹಾಕಿ ಮಲಗಿಸಿ ಥಟ್ಟನೆ ದಾಟಿ ನಡೆದಳು ॥ ೧೩ ॥ ಬೇಕಾದ ಫಲಗಳನೇಕ ಪುಷ್ಪಂಗಳ ಜೋಕೆ ಮಾಡುತಾ ವನದೋಳು । ಕೋಗಿಲೆ ಗಿಳಿ ನವಿಲ್ ಹಿಂಡುಗಳನೆ ಕಂಡು ಹಾಕುತಿದ್ದವು ಕಾಲಗಳನು ॥ ೧೪ ॥ ನಸುಕಿನೊಳಗೆ ಬಂದ ಸೋಮೇಶ ಭಟ್ಟನು । ಹಸು ಮಕ್ಕಳನ್ನೇ ಕಾಣುತಲಿ।ಮುಸುಕಿಟ್ಟು ತಂದು ಮುದ್ದಿಸುತ ತನ್ನಯ ಸತಿ ವಶ ಮಾಡಿಕೊಟ್ಟ ಕೈಯ್ಯೊಳಗ ॥ ೧೫ ॥ ಹುಟ್ಟಲಿಲ್ಲವೋ ಹೆಣ್ಣು ಮಕ್ಕಳು ನಮಗಿನ್ನು । ಕೊಟ್ಟಾನು ದೇವನೆಂದೆನುತಾ । ಅರ್ತಿ ಯಿಂದಲಿ ಮೂಬಟ್ಟಾ-ಲೀರಲು ಮಾಡಿ ।ತೊಟ್ಟಿಲೋಳಿಟ್ಟು ತೂಗಿದರು॥೧೬॥ನಾಮಕರಣವ ಮಾಡುತ ಹೆಸರಿಟ್ಟರು । ಸಾಯಕ್ಕ ಧೇಯಕ್ಕ ಎಂದೆನುತ । ಪ್ರಾಯಕ್ಕೆ ಬಂದ ಮಕ್ಕಳ ನೋಡಿ ಹುಡುಕಿದ ಸೋಮಾರ್ಕರಂಥಾ ವರರನು ॥ ೧೭ ॥ ಅರಸನ ಕರೆತಂದು ಅಕ್ಕನ ಕೊಟ್ಟರಾಗಲೇ ಕರೆಸಿ ಪ್ರಧಾನಿಗೆ ತಂಗಿಯನು । ಹರುಷದಿಂದಲಿ ಧಾರೆ ಎರೆದು ಹೆಣ್ಮಕ್ಕಳ ಕಳಿಸಿದನವರ ಮಂದಿರಕೆ ॥ ೧೮ ॥ ಅಕ್ಕರೆಯಿಂದ ಹೇಳಿದಳು ಸೋಮೇಶಮ್ಮ । ಮಕ್ಕಳ ಕರೆದು ಬುದ್ಧಿಯನು । ಶುಕ್ರವಾರದಗೌರಿ ಮರೆಯದೇ ಮಾಡೇ ಶ್ರೀಲಕ್ಷ್ಮೀ ಒಲಿವಳೆಂದೆನುತ ॥ ೧೯ ॥ ಸಾಯಕ್ಕ ಮಾಡಲಾ ಸಂತಾನ ಸಂಪತ್ತಿಗೆ । ಸಹಾಯವಾದಳು ಮಹಾಲಕ್ಷ್ಮೀ । ಧೇಯಕ್ಕ ಮರೆತು ದೇಹಕ್ಕೆ ಗ್ರಾಸವಿಲ್ಲದೆ ರಾಯನ ಸೆರೆಹಾಕಿದರು ॥ ೨೦ ॥ ಪೊಡವಿ ಪಾಲಕ ಬಂದ್ಹಿಡಿದು ಕೊಂಡೊಯ್ಯಲು । ಉಡುಗೆ ತೊಡುಗೆ ವಸ್ತ್ರಾಭರಣ । ಅಡಗಿತು ಸಕಲ ಸಂಪತ್ತು ಧೇಯಕ್ಕಗೆ ಧೃಢವಾಯಿತಾಗ ದಾರಿದ್ರ್ಯ ॥ ೨೧ ॥ ಮಾತನಾಡಿದರು ಮಕ್ಕಳು ತಾಯರೊಡಗೂಡಿ । ಈ ತೆರವಾಯಿತೇ ಬದುಕು । ಮಾತಾಪಿತೃರು ಒಡ ಹುಟ್ಟಿ- ದವರು ನಿನಗೆ ಮಾತನಾಡಿಸುವವರು ಯಾರಿಲ್ಲೇ ॥ ೨೨ ॥ ದೂರದಲ್ಲಿರುವ್ರೋರೆನ್ನ ತಾಯ್ತಂದೆಯರು । ಸಾರ್ಯಾದಲ್ಲಿರುವ್ರೋಳೊಬ್ಬ ತಂಗಿ । ಸೂರೆ ಹೋಯಿತು ದೊರೆತನ ಭಾಗ್ಯ । ಬಡ ಪ್ರಧಾನಿ ಹೇಗಿರುವನೋ ನಾ

ಕಾಣೆ ॥ ೨೩ ॥ ಕಂಡು ಬರುವೆನೆಂದು ಚಿಂದಿ ಮೈಗೆ ಸುತ್ತಿ ತುಂಡು ಕೋರಿಯ ಹೊದ್ದುಕೊಂಡು ।ಮಂಡೆ– ಗ್ಗಚ್ಚಿದ ತಾಳಾ ಪ್ರಣತಿ ಎಣ್ಣೆ ಹೊಳೆ । ದಂಡೀಲಿ ಬಂದು ಕುಳಿತನು ॥ ೨೪ ॥ ಪೋರ ನೀನ್ಯಾರೆಂದ್ವಿಚಾರ ಮಾಡಲು । ನೀರಿಗೆ ಬಂದ ನಾರಿಯರು । ದೂರದಿಂದ ಬಂದೆ ಧೇಯಕ್ಕನ ಹಿರಿಯ ಕುಮಾರನೆಂದ್ಹೇಳಿ ಕಳುಹಿದನು ॥ ೨೫ ॥ಬಂದ್ಹೇಳಿ– ದವನ ಅಂದ ಚಂದಗಳೆಲ್ಲ । ಕರೆತನ್ನಿ ಹಿತ್ತಲ ಬಾಗಿಲಿನಿಂದ । ಬಂದ್ಹೇಳಿಕೊಂಡ ದಾರಿದ್ರ್ಯ ಕಷ್ಟ ಗಳೆಲ್ಲ ಉಂಡುಟ್ಟು ಸುಖದಿ ತಾನಿದ್ದ ॥ ೨೬ ॥ ಆಲಯಕ್ಹೋಗಿ ಬರುವೆನೆಂದಪ್ಪಣೆ ಕೇಳಿ ಕಾಲಹರಣ ಮಾಡದಂತೆ । ಕೋಲಿನೊಳಗೆ ಹಣ ತುಂಬಿ ಕೈಯಲಿ ಕೊಟ್ಟು । ಆಲಸ್ಯವಿಲ್ಲದೇ ಕಳುಹಿದಳು ॥ ೨೭ ॥ ಬಾಲಕ ನಿನಗಿಂಥ ಕೋಲೇಕೆನುತಲಿ ಗೋಪಾಲಕ ಸೆಳೆದು ಕೊಂಡೊಯ್ಯೇ । ನೂತನದವರಿಗೆ ಇಂಥ ವಸ್ತು ಯಾಕೆಂದು । ಅಲೋಚಿಸುತ ತಾ ಬಂದ ॥ ೨೮ ॥ ಮಿಡುಕುತ್ತ ಬಂದು ಮಾತೆಗೆರಗಿದನಾಗ ಒಡನುಡಿ ವಾರ್ತೆ ಕೇಳುತಲಿ । ಕೊಡುವಷ್ಟು ಕೊಟ್ಟಾರು ನಮಗೆ ದಕ್ಕದೆನುತಲಿ । ನಡೆದನು ಮತ್ತೊಬ್ಬ ತನಯ ॥ ೨೯ ॥ ತಾಳಾ ಪ್ರಣತಿ ಎಣ್ಣೆ ತಲೆಗೆ ಪೂಸಿ ಮೊಳ ಕೋರಿಯನ್ನೆ ಹೊದ್ದುಕೊಂಡು । ಬಳಕುತ್ತ ಬಂದು ಭಾವಿಯ ಮೇಲೆ ಕುಳಿತ್ಹೇಳಿ ಕಳುಹಿದನವರ ಮಂದಿರಕೆ ॥ ೩೦ ॥ ಗೊತ್ತಿಲಿ ಕರೆತಂದು ಹಿತ್ತಲ ಬಾಗಿಲಲ್ಲೇ ವಾರ್ತೆಗಳನೆ ಕೇಳುತ । ಅತ್ಯಂತ ಕರುಣ ದಿಂದಲೇ ಭಕ್ಷ್ಯ ಪಾಯಸ । ಮೃಷ್ಟಾನ್ನವನ್ನುಣಿಸಿದರು ॥ ೩೧ ॥ ನಿತ್ಯುಪವಾಸ ಮಾಡುವರೆನ್ನ ಮನೆಯಲ್ಲಿ ಅಪ್ಪಣೆಗಳ ನೀಡೆಂದೆನುತ । ಬುತ್ತಿಯೊಳಗೆ ಹಣ ಕಟ್ಟಿ ಕಳುಹಲು ಕಾಗೆ ಕಚ್ಚಿ ಕೊಂಡೊಯ್ಯಲಾಕ್ಷಣದಿ ॥ ೩೨ ॥ ಏನು ಹೇಳಲಿ ನಾ ಹೋದ ಕಾರ್ಯ ಹೀನವಾಯಿತು ಹೀಗೆಂದೆನುತ । ನಾ ಹೋಗಿ ಬರುವೆನೆಂದೆನುತ ಮತ್ತೊಬ್ಬ ಕುಮಾರ ತಾ ತೆರಳಿದನು ॥ ೩೩ ॥ ಹರಕು ಕೋರಿಯನುಟ್ಟು ಒಡಕು ತಂಬಿಗೆ ಪಿಡಿದು ಕೆರಕು ಬುತ್ತಿಯಯನೇ ಕಟ್ಟಿಕೊಂಡು । ಗುರುತ್ಹೇಳಿ ಕಳುಹೆ ಹಿತ್ತಿಲ ಬಾಗಿಲಿನಿಂದ ಕರೆತಂದರಾಗ ಮಂದಿರಕೆ ॥ ೩೪ ॥ ಎರಡು ದಿನವಿಟ್ಟುಕೊಂಡು– ಪಚರಿಸುತ್ತ । ಬುರುಡೆಯೊಳಗೆ ಹಣವನ್ನು । ಕಡುಬೇಗದಿಂದ ಕೈಯ್ಯಲಿ ಕೊಡಲಾಗ । ನಡೆದೆತಾನಡವಿಮಾರ್ಗದಲಿ ॥ ೩೫ ॥ ಸೆಳೆದು ನಾಲಿಗೆ ಬಿಸಿಲೇರಿ

ಭಾವಿಯ ಕಂಡು । ಇಳಿದ ಪಾವಟಿಗೆಯಲ್ಲಿಟ್ಟು । ಬುಡು ಬುಡು ಉರುಳಿ ಮಡುವ ಸೇರಲದ ಕಂಡು ಮಿಡುಕುತ್ತ ಬಂದ ಮಂದಿರಕೆ ॥ ೩೬ ॥ ಗತಿ ಹೀನರೊಳಗೆ ನಮ್ಮಂಥ ನಿರ್ಭಾಗ್ಯರು ಪೃಥ್ವಿಯೊಳಗೆ ಕಾಣೆನೆಂದೆನುತಾ । ಅತಿ ಬಾಯಿ ಬಿಡುವ ಮಾತೆಯ ಕಂಡು ಮತ್ತೊಬ್ಬ ಸುತನಾಗ ತಾ ತೆರಳಿದನು ॥ ೩೭ ॥ ಸೊಕ್ಕಿದ ಮೈಗೆ ಛಿದ್ರೆ ಬಟ್ಟೆಯ ಸುತ್ತಿ । ಕುಕ್ಕುತ ಶೀರು ಹೇನುಗಳು । ಚಿಕ್ಕಮ್ಮಗೆ ಪೇಳಿ ಕಳುಹಲು । ಕರೆತಂದ್ರು ಹಿತ್ತಿಲ ಬಾಗಿಲಿನಿಂದಾ ॥ ೩೮ ॥ ಎಳೆಂಟು ದಿನದಲ್ಲಿ ಬಹಳುಪಚರಿ- ಸುತ್ತ । ಬಾಳುವ ಕ್ರಮ ಕೇಳುತಲಿ । ಜಾಳಿಗಿ ಹೊನ್ನು ಚಮ್ಮಾಳಿಗೆಯಲಿ ತುಂಬಿ । ಕಾಲ ಮೆಟ್ಟಿಸಿ ಕಳುಹಿದಳು ॥ ೩೯ ॥ ಅದು ಮೆಟ್ಟಿ ಬರುತಿರೆ ಒದಗಿ ಬಂದಾಂಶದಿ ಹುದಲು ಕಾಣದೆ ಸಿಗಿಬಿದ್ದು । ಎದೆ ಬಾಯಿ ಬಿಡುತೆತ್ತ ಹುಡುಕಿದರಿಲ್ಲೆಂದು । ಎದುರಿಗೆ ಬಂದು ತಾ ನಿಂತಾ ॥ ೪೦ ॥ ನಾಲ್ಕು ಮಂದಿಯ ಸುದ್ದಿ ನಾನಾ ಪರಿಯಲಿ ಕೇಳಿ । ವ್ಯಾಕುಲವಾಯಿತು ಮನಕೆ । ನಾ ಕಂಡು ಬರುವೆನೆಂದೆನುತ ಧೇಯಕ್ಕ । ಆ ಕಾಲದಲ್ಲಿ ತೆರಳಿದಳು ॥ ೪೧ ॥ ಉಟ್ಟಳು ಮಾರು ಸೀರೆಯನ್ನು ತೋಳಿನಲಿ । ತೊಟ್ಟಾಳು ಚಿಂದಿ ಕುಪ್ಪಸವ । ಕಟ್ಟಿದ ಜಡೆಗೆಣ್ಣೆ ಹಚ್ಚಿ ಗಂಟನೆ ಹಾಕಿ । ಬೊಟ್ಟು ಕುಂಕುಮ ತೀಡಿದಳು ॥ ೪೨ ॥ ಒಂದೊಂದು ಗಾಜಿನ ಬಳೆ ಕೈಯಲ್ಲಿ । ಕಂದಿ ಕುಂದಿದ ಕೂಸನ್ನೆತ್ತಿ ಬಂದಾಳು ನಿಮ್ಮ ಧೇಯಕ್ಕನೆಂದೆನುತಲಿ ತಂಗಿಗೇ ವಾರ್ತೆಯ ಕಳುಹಿದಳು ॥ ೪೩ ॥ ಅಕ್ಕನ ಕರೆತಂದರಾ ಹಿತ್ತಿಲಿಂದಲಿ ಶುಕ್ರವಾರದ ಶುಭ ದಿನದಿ । ಮಕ್ಕಳು ಸೊಸೆಯ ರೊಡಗೂಡಿ ಬಂದು ಧೇಯಕ್ಕನ ಚರಣಕ್ಕೆರಗಿದರು ॥ ೪೪ ॥ ಅಂದಗಲಿದ ಅಕ್ಕ ತಂಗಿಯರಿಬ್ಬರು ಇಂದಿಗೆ ಕಲೆತೆವೆಂದೆನುತಾ ಮಿಂದು ಮಡಿಯನುಟ್ಟು ಬಂದೆಲ್ಲಾ ಪರಿವಾರ ಬಂದು ಭೋಜನಕೆ ಕುಳಿತರು ॥ ೪೫ ॥ ಹೋಳಿಗೆ ಹೊಸ ಬೆಣ್ಣೆ ಕಾಸಿದಾ ತುಪ್ಪವು । ಕ್ಷೀರ ಶಾವಿಗೆಯ ಮೃಷ್ಟಾನ್ನ । ಬೇಗದಿಂದುಂಡು ಹಾಕುತಲೆ ತಾಂಬೂಲ ತೂಗು ಮಂಚದಿ ಮಲಗಿದರು ॥ ೪೬ ॥ ಬೆಳಗಾಗಲೆದ್ದು ಹೇಳಿದರೆ ಆ ಸೊಸೆಯರ ಕರೆದು ಸಾಯಕ್ಕ ಕೆಲಸವ । ಬಿಳಿಜೋಳ ಕುಟ್ಟಿ ಬೀಸಿರೆ ನೀವು ಇಂದಿನ ಅಡುಗೆಯ ಕ್ರಮ ಹೇಳುವೆನು ॥ ೪೭ ॥ ಹುಳಿನುಚ್ಚು ಮಾಡೀರೆ ತಿಳಿಯ ಕಟ್ಟಂಬಲಿ । ಎಳೆಸೊಪ್ಪು

ಹಿಂಡಿಪಲ್ಯವನು । ತರಿಸುವೆ ಗಾಣದ ಎಳ್ಳಿನ ತಿಳಿ ಎಣ್ಣೆ । ಹಿಟ್ಟೀನ ಕಡಬು
ನೀವ್ ಎನುತ ॥ ೪೮ ॥ ಅದ ಕೇಳಿ ಧೇಯಕ್ಕ ಹೃದಯ ತಲ್ಲಣಿಸುತ್ತ
ಎದೆಯೊಳಗಲಗು ನಟ್ಟಂತೆ । ಉರಿಯ ಒಳಗೆ ಎಣ್ಣೆ ಸುರುವಿದಂತಾಯಿತು
ಸಿರಿಯು ಸಂಪತ್ತಿನಿಂದಾಕೆಗೆ ॥ ೪೯ ॥ ಗರಗಸದಿಂದಲಿ ಕೊರೆದುಪ್ಪು ಸಾಸಿವೆ
ಅರೆದ್ಹಚ್ಚಿದಂಥ ಮಾತುಗಳು । ಹುಟ್ಟ ಬಡವರು ಬರಬಾರದು ಜಗದೋಳು
ಅಟ್ಟುಂಬೋ ಮನೆಯ ಬಾಗಿಲಿಗೆ ॥ ೫೦ ॥ ಕಷ್ಟದಿ ಕಾಲ ಕಳೆಯಲಾಗದಿದ್ದರೆ
ಅಟ್ಟಡವಿ ಸೇರೋದೇ ಲೇಸು । ಪರರ ಮನೆಯಲಿ ಅಪಹಾಸ್ಯವಾಗುವದಕ್ಕಿಂತಾ
ವನವಾಸಗಳು ಲೇಸೆಂದೆನುತಾ ॥ ೫೧ ॥ ಮನದ ಸಂತಾಪ ಸೈರಿಸಲಾರದೆದ್ದಳು
ದನವನ್ನೇ ಕಟ್ಟೋ ಮಂದಿರಕೆ । ಎತ್ತಿನ ಗೋದಾನಿ ಒಳಗೆ ಕಂದಲ ದಂಟು
ಸಿಪ್ಪೆಗಳನೆ ಹೊದ್ದುಕೊಂಡು । ಕಚ್ಚುತ್ತಿರಲು ಚಿಕ್ಕಾಡು ಕ್ರಿಮಿಗಳೆಲ್ಲಾ । ಅತ್ತಿತ್ತ-
ಲುಗದೇ ಮಲಗಿದಳು ॥ ೫೨ ॥ ಮಧ್ಯಾಹ್ನವಾಯಿತು ಅಡಿಗೆ ಧೇಯಕ್ಕನ ಸದ್ದು
ಸುಳಿವು ಕಾಣಲಿಲ್ಲ । ನಿದ್ರೆಯಿಂದೆಲ್ಲೋ ಮಲಗಿದ್ದಾಳಾಕೆಯು । ಇದ್ದಲ್ಲಿಂದ
ಕರೆತನ್ನಿರವಳ ॥ ೫೩ ॥ ಬಲ್ಲಷ್ಟು ಮನೆ ಹುಡುಕಿದೆವು ಅತ್ತೆಬಾಯಾರ ।
ಸೊಲ್ಲು ಸುಳಿವು ಕಾಣಲಿಲ್ಲಾ । ಎಲ್ಲಿ ಹುಡುಕಿದರಿಲ್ಲವೆನುತ ಬಂದಾಗ ಎಲ್ಲ
ಸೊಸೆಯರು ಹೇಳಿದರು ॥ ೫೪ ॥ ಒಳಗೆಲ್ಲ ಹುಡುಕಿ ಬಂದೇವು ಸಂದು
ಗೊಂದಿಲಿ ಆಕಳು ಕಟ್ಟುವ ಗೋದಾನಿಯಲಿ । ಸೆಳೆದು ದಂಟುಗಳ ಹಾಕುತ್ತಿರು-
ವಾಗ ಸುಳಿವು ಕಂಡ್ಹಿಡಿದ ರಾಕ್ಷಣದಿ ॥ ೫೫ ॥ ಸಿಕ್ಕಾರು ನಮ್ಮ ಅತ್ತೆಯವರು
ಎಂದೆಬ್ಬಿಸುತಲಿ । ಹಸ್ತ ಹಿಡಿದು ಕರೆತಂದೇವ್ । ಉಕ್ಕುವ ಉರಿಮೋರೆಯನೆ
ನೋಡಿ ಮನದಾ ಸಿಟ್ಟೇನೆನುತಾ ಕೇಳಿದರು ॥ ೫೬ ॥ ಹೇಳುವದೇನು
ಕೇಳುವದೇನು ನಿಮಗಿಂಥಾ । ಎಳ್ಳು ಆದೆನೆ ನಾನೆಂದೆನುತಾ । ಜೋಳದನ್ನವ
ಕಾಣದೇ ನಾ ಬಂದೇನೆ ನಾಳೆ ಪೋಗುವೆ ನಮ್ಮ ಮನೆಗೆ ॥ ೫೭ ॥ ಭಕ್ಷ್ಯ
ಪಾಯಸ ಮಾಡಿ ನಿನ್ನಿನ ದಿವಸ ಈವತ್ತೇ ದುರ್ಭಿಕ್ಷದಡಿಗೆಯು । ಭಿಕ್ಷಕ್ಕೆ
ಬಂದೆನೆ ನಿಮ್ಮ ಮನೆಗೆ ನಾನು । ಆ ಕ್ಷಣ ಜಲವ ತುಂಬಿದಳು ॥ ೫೮ ॥ ಅಕ್ಕನ
ವಚನವ ಕೇಳಿ ಆಲೋಚಿಸಿ । ನಕ್ಕಳು ತನ್ನ ಮನದಲ್ಲಿ । ಶುಕ್ರವಾರದ ಗೌರಿ
ಮಾಡದೇ ನೀವಿಂಥ ದುಃಖಕ್ಕೆ ಗುರಿಯಾದಿರೆಂದು ॥ ೫೯ ॥ ಬರುವ ಕಾಲದಲ್ಲಿ

ಕರೆದು ನಮ್ಮಮ್ಮನು । ಅರುಹಲಿಲ್ಲವೇ ಗೌರಿಯನ್ನು । ಸಿರಿಯು ಸಂಪತ್ತನ್ನು ಕೊಡುವಂಥ ಶನಿವಾರ ಮರೆತು ಬಿಟ್ಟೇನೆ ಅಕ್ಕಯ್ಯಾ ॥ ೬೦ ॥ ಲಕ್ಷ್ಮೀ ದೇವಿಯ ಅಲಕ್ಷ್ಯ ಮಾಡಿದ್ದರಿಂದ ಈಕ್ಷಕ್ಕೆ ಬಂದು ತೊಲಗಿದಿರಿ । ಈ ಕ್ಷಣ ನಮ್ಮ ಮನೆಯಲ್ಲಿ ಪೂಜಿಸೆ । ಸಾಕ್ಷಾತ್ ಶ್ರೀಗೌರಿಯನ್ನು ॥ ೬೧ ॥ ಎರೆದು ಪೀತಾಂಬರ ಉಡಿಸಿ ತಂದಿಟ್ಟರೆ । ಪರಿಪರಿ ವಸ್ತ್ರಾಭರಣ । ವರ ಮಣೆಯಮೇಲೆ ಮಂಟಪದೋಳು ಚಟ್ಟಂಗಿ । ಬರೆದಿಟ್ಟರಾಗ ಪೀಠದಲಿ ॥ ೬೨ ॥ ಮುಂದೆ ಕಟ್ಟಿಸಿದರು ಮಕರ ತೋರಣಗಳ । ದುಂದುಭಿ ಭೇರಿ ಹೊಡೆದವು । ಮಿಂದು ಮುತ್ತೈದೇರು ಸಹಿತ ಬ್ರಾಹ್ಮಣರೆಲ್ಲ ಅಂದರು ವೇದೋಕ್ತ ಮಂತ್ರಗಳ ॥೬೩॥ ಹಾಕಿದರೈದು ಫಲಗಳಕ್ಕಿ ಅದರೋಳು ನಾಲ್ಕೆಂಟು ನಂದಾದೀವಿಗೆಯ । ಶ್ರೀ ಕಮಲ ಮಧ್ಯದಲ್ಲಿ ಸ್ಥಾಪನೆ ಮಾಡಿ । ಅನೇಕ ಭಕ್ತಿಂದಾ ಕುಳಿತು ॥ ೬೪ ॥ ಅರಿಶಿಣ ಪಿಡಿದು ಹಚ್ಚುತಲಿ ಶ್ರೀಗೌರಿಗೆ ಸರಕಾನೆ ತಿರುವೆ ಮೋರೆಯನು । ಎಡ-ಕ್ಕೋಗಿ ಎರಡು ಕೈಮುಗಿದ್ದೇಳಿಕೊಂಡರೆ ಬಲಕೆ ಬಂದಳು ಭಾಗ್ಯಲಕ್ಷ್ಮೀ ॥೬೫॥ ಮಕ್ಕಳು ಮಾಡುವ ಮಹಾತಪ್ಪು ಅಪರಾಧ ಹೆತ್ತ ಮಾತೆಯರೆಣಿಸುವರೆ । ಸತ್ಯವಂತಳು ಈಕೆ ಸಮರಿಲ್ಲವೆನುತಲಿ ಭಕ್ತಿಯಿಂದಲಿ ಕರವ ಮುಗಿದರು ॥೬೬॥ ಕಡಲಾಂಬುವಾಸನ ಮಡದಿ ಮಹಾಲಕ್ಷ್ಮೀಗೆ ಒಡೆದ ತೆಂಗಿನಕಾಯಿ ಫಲವು।ಮಡದಿಯರಿಗೆ ಅರಿಶಿಣ ಗಂಧ ಕುಂಕುಮ ಕೊಡುತ ಪುಷ್ಪಗಳುಡಿತುಂಬೆ ॥ ೬೭ ॥ ಬಟ್ಟ ಮುತ್ತಿನ ಹರಿವಾಣದೊಳ್ ನೈವೇದ್ಯ । ಭಕ್ಷ್ಯ ಪಾಯಸ ಬಡಿಸಿದರು । ಸಂತುಷ್ಟಿಯಿಂದ ನೋಡುತಲಿ ಧೇಯಕ್ಕಗೆ ಅಷ್ಟೈಶ್ವರ್ಯ ನೀಡಿದಳು ॥ ೬೮ ॥ ದುಂಡುಮುತ್ತಿನ ಹರಿವಾಣದೊಳ್ ನೈವೇದ್ಯ । ಮಂಡಿಗೆ ತುಪ್ಪ ಸಕ್ಕರೆಯು । ಕಂಡು ಸಂತೋಷ ದಿಂದಾಗ ಧೇಯಕ್ಕನ ಗಂಡಗೆ ರಾಜ್ಯ ನೀಡಿದಳು ॥ ೬೯ ॥ ಹೊಳೆವ ಚಿನ್ನದ ಹರಿವಾಣದೊಳ್ ಕಡಬು ಕಟ್ಟಂಬಲಿ ಬಡಿಸಿ । ತರಿಸಿದೆಳ್ಳೆಣ್ಣೆ ಹಿಂಡಿಯ ಪಲ್ಯ ತಾಂಬೂಲ । ನಲಿನಲಿದಾಡಿ ನೋಡುತಲಿ ॥ ೭೦ ॥ ಅಕ್ಕ ತಂಗಿಯರಾಗ ಜೊತೆಯಲಾರತಿ ಎತ್ತಿ ಮುತ್ತೈದೆ-ಯರು ಹಾಡುತಲಿ । ಉತ್ತಮಾಂಗನಿಗೆ ಮಂತ್ರಾಕ್ಷತೆಗಳ ಹಾಕಿ । ಎತ್ತಿದಾರತಿ ಇಳಿಸಿದರು ॥ ೭೧ ॥ ಉಂಡರು ಸಕಲ ಜನರು ಸಹಿತಾಗಿ ತಕ್ಕೊಂಡು ಕರ್ಪೂರದ

ವಿಳ್ಯಗಳ । ಉಂಡು ಸಂತೋಷದಿಂದಾಗ ಕೂತಿರಲು । ಬಂದೆರಗಿದರು ಬಾಲಕರು ॥ ೭೨ ॥ ಅರಸು ತಾನಾಗಿಯೇ ಬಂದನೇ ನಮ್ಮಯ್ಯನು ಕರೆಸಿದ ನಿಮ್ಮ ನೆಂದೆನುತ । ಹರುಷದಿಂದವರ ಮಾತುಗಳ ಕೇಳ್ಯಾನಂದ ಭರಿತರಾದರು ಮನೆಯಲ್ಲಿ ॥ ೭೩ ॥ ಗಡಗಡನಾಗ ಬಂದವು ತೇಜಿ ರಥಗಳು । ನುಡಿದವು ಭೇರಿ ವಾದ್ಯಗಳು । ಸಡಗರದಿಂದುಡುಗೋರೆ ವಿಳ್ಯವ ಕೊಟ್ಟು ನಡೆದರು ತಮ್ಮ ಮಂದಿರಕೆ ॥ ೭೪ ॥ ಅಕ್ಕತಂಗಿಯರು ಅಂದಣವೇರಿ ಕೊಂಡು ಪಲ್ಲಕ್ಕಿಯೊಳಗೆ ಕುಳಿತುಕೊಂಡು । ಅರ್ತಿಯಿಂದಲಿ ಚಾಮರ ಬೀಸುತಲಿ ತಮ್ಮ ಪಟ್ಟಣಕ್ಕೆ ನಡೆತಂದರು ॥ ೭೫ ॥ ಆ ಗೋಪಾಲ ತಂದಾಗ ಕೈಯಲಿ ಕೊಡೆ । ಈ ಕೋಲು ನಿಮ್ಮದೆಂದೆನುತ । ಹಾಕಿತು ಕಾಗೆ ಹಣದ ಬುತ್ತಿಯ ಗಂಟನು । ಸ್ವೀಕರಿಸಿದ– ನೊಬ್ಬ ಸುತನು ॥ ೭೬ ॥ ಮಡುವಿನೊಳಗೆ ಮುಳುಗಿ ಏಳುತಿರುವುದ ಕಂಡು । ಬುರುಡೆ ಹಣವ ಕೈಯ್ಗೊಂಡು । ನಡೆವ ಮಾರ್ಗದೊಳಗೆ ಹಾವಿಗೆ ಕಂಡು । ಹಿಡಿದುಕೊಂಡ್ಹಿಗ್ಗಿ ನಡೆದರು ॥ ೭೭ ॥ ದಡದಡನಾಗ ಬಂದವು ಮಳೆಗಳು । ಸಿರಿ ತೊಯ್ಯಲಾಗದೆಂದೆನಲು । ಹರದೇರಿಬ್ಬರು ಸೆರಗನೇ ಮರೆಮಾಡಿ । ಕರೆತಂದರಾ ತೋಟದಲಿ ॥ ೭೮ ॥  ಒಂದು ಘಳಿಗೆ ಸ್ಥಳವನೆ ಮಾಡಿ ಕೊಟ್ಟರೆ ಬಂದೀತು ಬಹಳ ಪುಣ್ಯಗಳು । ಹಾಗೆಂದ ಮಾತಿಗೆ ತಾನೊಳಗಿನಿಂದ ಬಂದು । ಇಲ್ಲೆಲ್ಲಿ ಸ್ಥಳವು ಹೋಗೆಂದಾ ॥ ೭೯ ॥ ಮನ್ನಿಸಿ ಕರೆದು ಮುದ್ದಿಸಿ ಮಹಾಲಕ್ಷ್ಮೀ ದೇವಿಗೆ ಸ್ಥಳ ಮಾಡಿ ಕೊಟ್ಟು । ಮತ್ತೆ ನೀವೀಗ ಕೋಪಿಸಲಾರದೀ ಗೌರಿ ಭಕ್ತಿಯಿಂದಲಿ ಕರವ ಮುಗಿದಳು ॥ ೮೦ ॥ ಎತ್ತಲ ಗೌರಿ ಎಲ್ಲಿಯ ದ್ರೋಹ ನಮಗಿನ್ನು ಪತ್ನಿಯ ಕರೆದು ಕೇಳಿದನು । ಸತ್ಯವಂತಳು ಆಕೆ ಸಮರಿಲ್ಲವೆನುತಲಿ । ಭಕ್ತಿಯಿಂದಲಿ ಕರವ ಮುಗಿದಳು ॥ ೮೧ ॥ ಹಿಂದಕ್ಕೆ ಸೋಮೇಶಮ್ಮಾನ ಮನೆಯಲ್ಲಿ । ನಿಂದೆ ಮಾಡಿದೆ ಗೌರಿಯನ್ನು । ಬಂದಿತು ನಮಗೆ ವನವಾಸ ವೆಂದೆನುತಲಿ । ಗಂಡಗೆ ತಿಳಿ ಹೇಳಿದಳು ॥ ೮೨ ॥ ಜಾತವಾದರು ಪಾರಿಜಾತ ವನದಾಗೆ । ಅನಾಥರನ್ನ ಮಾಡಿ ಬಂದೆ । ಪ್ರೀತಿಯಿಂದಲಿ ಸಲಹಿದವರ್ ಯಾರೆಂದು । ಆ ತಾಯಿ ಸುತರ ಕೇಳಿದಳು ॥ ೮೩ ॥ ತುಲಸಿಗೆನುತ ಬಂದ ಸೋಮೇಶಭಟ್ಟನು । ಗಳಿಸಿಕೊಂಡೊಯ್ದ ನಮ್ಮನ್ನ । ಬೆಳೆಸಿ ಎರೆದನೆ ಧಾರೆ

ಅರಸು ಪ್ರಧಾನಿಗೆ । ಕಳಿಸಿದನಾಗ ಸಂಭ್ರಮದಿ ॥ ೮೪ ॥ ಅಕ್ಕರೆಯಿಂದ ಪೇಳಿದಳು ಸೋಮೇಶಮ್ಮ । ಶುಕ್ರವಾರದ ಗೌರಿಯನ್ನು । ಮಕ್ಕಳು ಸೊಸೆಯರು ಇದು ಎಲ್ಲ ಸೋಮೇಶಭಟ್ಟನ ಪುಣ್ಯವಿದೆಂದು ॥ ೮೫ ॥ ಹಿಂದಾಗಲೊನವಾಸ ಮುಂದ್ಯಾಕೆ- ನುತಲಿ । ತಂದು ಕೊಟ್ಟರು ಉಡುಗೊರೆಯ । ಮುಂಗಯ್ಯ ಹಿಡಿದು ಮುಪ್ಪಿನ ತಾಯಿ ತಂದೇರ । ಅಂದಣವನೇರಿಸಿದರು ॥ ೮೬ ॥ ಭೋರೆಂಬೋ ನದಿಯ ದಾಟುತಲಿ ಕಟ್ಟಿಸಿದರು । ಊರ ಬಾಗಿಲಿಗೆ ತೋರಣವ। ಭೇರಿ ನಗಾರಿ ತುತ್ತೂರಿ ವಾದ್ಯಗಳಿಂದ । ಸಾಲು ದೀವಟಿಗೆ ಸಂಭ್ರಮದಿ ॥ ೮೭ ॥ ಹಾಸುತ ನಡೆಮುಡಿ ಒಳಕದಲಾರತಿ । ಬೀಸುತ್ತ ಬಿಳಿಯ ಚಾಮರವಾ । ಸೋಸಿಲಿಂದಲಿ ಕರೆತಂದರ್ ಅರಮನೆಗೆ । ಸಿಂಹಾಸನದಳೊಪ್ಪಿರೋ ಮಹಾಲಕ್ಷ್ಮೀಗೆ ॥ ೮೮ ॥ ಅರಳು ಪೂಗಂಧ ಕುಂಕುಮವ ನಾರಿಯರು । ಹರಿವಾಣದೊಳು ತಂದಿರಿಸಿ ।ಪರಿಪರಿಯಲಿ ಸರ್ವಾಂಗ ಪೂಜೆಯ ಮಾಡಿ । ಫಲಗಳನೊಪ್ಪಿಸಿ ಕೈಯ ಮುಗಿಯೇ ॥ ೮೯ ॥ ಬಿತ್ತಿದ ಬೆಳೆರಾಶಿ ಉಕ್ಕುವ ಧನಧಾನ್ಯ । ಉಕ್ಕುವಂದದಿ ಕ್ಷೀರರಸವು । ಲೆಕ್ಕವಿಲ್ಲದೇ ಮಕ್ಕಳಾಗೋರು ಮನೆತುಂಬ । ಮುತ್ತೈದೆತನವ ನೀಡುವಳು ॥ ೯೦ ॥ ತಾ ಸುರಕಾಮಧೇನು ಎಂದೆನಿಸಿ **ಭೀಮೇಶಕೃಷ್ಣನು** ಸಹಿತಾಗಿ । ಲೇಸಾಗಿದ್ದ ಸಂಪತ್ತನ್ನೆಲ್ಲ ಕೊಟ್ಟು ವಾಸವಾದಳು ಮಹಾಲಕ್ಷ್ಮೀ ॥ ೯೧ ॥

ಮಂಗಳಂ ಜಯವೆನ್ನಿ ಮಂಗಲಂ ಶುಭವೆನ್ನಿ । ಮಂಗಳಾಂಗನೇ ಮಹಾಲಕ್ಷ್ಮೀ । ಕಂಗಳು ತೆರೆದು ಕಟಾಕ್ಷದಿ ನೋಡಲು । ಇಂಗೋದು ಸಕಲ ಪಾಪಗಳು ॥ ಬರಡು ಕರೆಯಲಿ । ಬಂಜೆಗೆ ಮಕ್ಕಳಾಗಲಿ । ಕುರುಡಗೆ ಕಂಗಳು ಬರಲಿ । ಬರ ಹರಿಯಲಿ । ದಾರಿದ್ರ್ಯಗಳಿಂಗಲಿಶ್ರೀ ಹರಿ ನಮ್ಮ ಹೃದಯದೊಳಗಿರಲಿ ॥

## ಶ್ರೀಕೃಷ್ಣಾರ್ಪಣಮಸ್ತು